# ಚಾಟ್‌ಜಿಪಿಟಿ!
## ಚಟ್‌ಪಟ್ ಚಾಟ್‌ಬಾಟ್




ಕೇಳಿದ್ದಕ್ಕೆ ಪಠ್ಯ ರೂಪದಲ್ಲಿ ಚಿನಕುರಳಿಯಂತೆ ಉತ್ತರಿಸುವ ಚಾಟ್‌ಬಾಟ್ ಟೆಕ್ ವ್ಯವಸ್ಥೆಯಲ್ಲಿ, ನಿರ್ದಿಷ್ಟ ಪ್ರಶ್ನೆಗೆ ನಿರ್ದಿಷ್ಟ ಉತ್ತರವನ್ನಷ್ಟೇ ನೀಡುವ ತಂತ್ರಜ್ಞಾನವೊಂದು ಹೊಸ ಸಂಚಲನ ಮೂಡಿಸಿದೆ.

■ **ಶಶಿಕುಮಾರ್ ಸಿ.**

ನಿರ್ದಿಷ್ಟ ವಿಷಯದ ಬಗ್ಗೆ ಲೇಖನ, ಕಥೆ, ಕವನ, ಕಾದಂಬರಿ, ಪತ್ರ, ಪ್ರಬಂಧ ಬರೆಯಬೇಕೆ? ಅಥವಾ ಪರೀಕ್ಷೆಯಲ್ಲಿ ಎದುರಾಗುವ ಪ್ರಶ್ನೆಗಳಿಗೆ ಚಟ್ ಪಟ್ ಅಂತ ಉತ್ತರಿಸಬೇಕೆ? ಇದೋ ನಿಮ್ಮ ನೆರವಿಗೆ ಎನ್ನುತ್ತಿದೆ 'ಚಾಟ್‌ಜಿಪಿಟಿ ಚಾಟ್‌ಬಾಟ್'. ಈ ಸಾಫ್ಟ್‌ವೇರ್‌ನಲ್ಲಿ, ನಿಮಗೆ ಅಗತ್ಯವಾದ ಪಠ್ಯವು ಬಹು ವೇಗದಲ್ಲಿ ನಿಮ್ಮ ಕಣ್ಣಮುಂದೆ ಇರುತ್ತದೆ. ಇದು ಬರವಣಿಗೆ ಕ್ಷೇತ್ರದಲ್ಲಿ ದೊಡ್ಡ ಸದ್ದು ಮಾಡುತ್ತಿರುವ ಚಾಟ್‌ಬಾಟ್ 'ಚಾಟ್‌ಜಿಪಿಟಿ'ಯ ಚಮತ್ಕಾರ.

ವಿಷಯವೊಂದರ ಮಾಹಿತಿಗಾಗಿ ಗೂಗಲ್‌ಗೆ ಕೀವರ್ಡ್‌ಗಳನ್ನು ಉಣಿಸುತ್ತಿದ್ದ ಮಾದರಿಗೆ ಪರ್ಯಾಯವಾಗಿ ಚಾಟ್‌ಜಿಪಿಟಿಯನ್ನು ಬಳಸಬಹುದು. ಇದೊಂದು ಅತ್ಯಂತ ನಂಬಿಕಾರ್ಹ ಮೆಷಿನ್ ಲರ್ನಿಂಗ್ ಮಾಡೆಲ್ ಆಗಿದ್ದು, ಯಂತ್ರಗಳು ಕಲಿಯುವುದನ್ನು ಸಾಧ್ಯವಾಗಿಸುವ ಸಂಕೀರ್ಣ ವ್ಯವಸ್ಥೆಯಾಗಿದೆ. ಪಠ್ಯರೂಪದಲ್ಲಿ ನಾವು ಕೇಳುವ ಪ್ರಶ್ನೆಗಳನ್ನು ಅರ್ಥಮಾಡಿಕೊಂಡು, ಅವುಗಳಿಗೆ ಪಠ್ಯರೂಪದಲ್ಲೇ ಉತ್ತರಗಳನ್ನು ಕೊಡುವುದು ಇದರ ವಿಶೇಷ. ಚಾಟ್‌ಜಿಪಿಟಿ (ChatGPT) ಪೈಕಿ 'ಜಿಪಿಟಿ' ಎನ್ನುವುದು ಜನರೇಟಿವ್ ಪ್ರೀ–ಟ್ರೈನ್ಡ್ ಟ್ರಾನ್ಸ್‌ಫಾರ್ಮರ್ (Generative Pretrained Transformer) ಎನ್ನುವುದರ ಹ್ರಸ್ವರೂಪ.

'ರಾಜ್ಯದ ಸರ್ಕಾರಿ ಶಾಲೆಗಳ ವಸ್ತುಸ್ಥಿತಿ' ಬಗ್ಗೆ ಅಂಕಿ ಅಂಶಗಳ ಸಮೇತ ವರದಿಯೊಂದನ್ನು ಈ ಚಾಟ್‌ಜಿಪಿಟಿಯಲ್ಲಿ ಕೋರಿದರೆ ಕ್ಷಣಾರ್ಧದಲ್ಲಿ ಆ ಕುರಿತ ವರದಿಯು ಸಿದ್ಧವಾಗಿರುತ್ತದೆ. ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆ ಬಳಿ ಸಂಭವಿಸಿದ ಅಪಘಾತದ ಬಗ್ಗೆ ಸುದ್ದಿ ಕೋರಿದರೆ, ಸುದ್ದಿ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುವಂತೆಯೇ ವರದಿಯನ್ನು ಸಿದ್ಧಪಡಿಸುತ್ತದೆ ಈ ಚಾಟ್‌ಜಿಪಿಟಿ.

ನಾವು ಕೇಳುವ ಪ್ರಶ್ನೆಗಳಿಗೆ ಉತ್ತರ ಹುಡುಕಿಕೊಡುವ ಗೂಗಲ್‌ನಂಥ ವ್ಯವಸ್ಥೆಗಳು, ವಿವಿಧ ವಿಷಯಗಳ ಕುರಿತ ಮಾಹಿತಿಯಿಂದ ತುಂಬಿ ತುಳುಕುವ ಜಾಲತಾಣಗಳು ಈಗಾಗಲೇ ಇವೆ. ಈ ಎಲ್ಲ ವ್ಯವಸ್ಥೆಗಳು ಮೂರನೇ ವ್ಯಕ್ತಿಯಿಂದ ಮಾಹಿತಿಯನ್ನು ಕಲೆಹಾಕಿ ಒದಗಿಸುತ್ತವೆ. ಆದರೆ ಚಾಟ್‌ಜಿಪಿಟಿಯು ಬಳಕೆದಾರ ಕೇಳಿದ ಪ್ರಶ್ನೆಗೆ ತಾನು ಸಂಗ್ರಹಿಸಿದ ಮಾಹಿತಿಯನ್ನೊಮ್ಮೆ ಅವಲೋಕಿಸಿ ಸ್ವಂತಿಕೆಯಿಂದ ಮನುಷ್ಯನಂತೆಯೇ ಯೋಚಿಸಿ ಪಠ್ಯ ರೂಪದಲ್ಲೇ ಉತ್ತರಿಸುತ್ತದೆ.

ಸರ್ಚ್ ಎಂಜಿನ್ ಬಳಸಿಕೊಂಡು ತಮಗೆ ಕೊಟ್ಟ ಟಾಸ್ಕ್ ಪೂರ್ಣಗೊಳಿಸಲು ವಿದ್ಯಾರ್ಥಿಗಳು ಸೇರಿದಂತೆ ಎಲ್ಲ ವರ್ಗದವರೂ ಗೂಗಲ್‌ನಂಥ ವ್ಯವಸ್ಥೆಗಳನ್ನು ಬಳಸುವುದು ಕೋವಿಡ್ ಮತ್ತು ಕೋವಿಡ್ ನಂತರದ ಕಾಲಮಾನದಲ್ಲಿ ಸಾಮಾನ್ಯವಾಗಿಬಿಟ್ಟಿದೆ. ಹೀಗಿರುವಾಗ ಚಾಟ್‌ಜಿಪಿಟಿ ವಿಶೇಷದ ಬಗ್ಗೆ ಪ್ರಶ್ನೆ ಎದುರಾಗಬಹುದು. ಚಾಟ್‌ಜಿಪಿಟಿಯು ನೇರವಾಗಿ ನಮ್ಮ ನಿರ್ದಿಷ್ಟ ಅಗತ್ಯಕ್ಕೆ ತಕ್ಕ ಮಾಹಿತಿಯನ್ನೇ ಕೊಡಲು ಪ್ರಯತ್ನಿಸುತ್ತದೆ. ಇದು ಒಂದು ರೀತಿಯಾಗಿ ಕೃತಕ ಬುದ್ಧಿಮತ್ತೆ ವ್ಯವಸ್ಥೆ ಇದ್ದಂತೆ.

ಚಾಟ್‌ಜಿಪಿಟಿಯು ಪಠ್ಯರೂಪದಲ್ಲಿರುವ ಅಗಾಧ ಪ್ರಮಾಣದ ದತ್ತಾಂಶವನ್ನು ಸಂಸ್ಕರಿಸುವುದರ ಜೊತೆಗೆ ಬರೆಯುವುದನ್ನು ಕಲಿಯುವುದು, ಕಲಿತದ್ದನ್ನು ಬಳಸಿಕೊಂಡು ನಮಗೆ ಬೇಕಾದ ಪಠ್ಯವನ್ನು ನಮಗೆ ಬೇಕಾದಂತೆಯೇ ಬರೆದುಕೊಡುತ್ತದೆ. ಈ ವ್ಯವಸ್ಥೆಯು ಹೆಚ್ಚು ಹೆಚ್ಚು ದತ್ತಾಂಶವನ್ನು ಸಂಸ್ಕರಿಸುವುದರಿಂದ ಚಾಟ್‌ಜಿಪಿಟಿಯ ಪಠ್ಯಕ್ಕೂ ಮನುಷ್ಯನ ಪಠ್ಯಕ್ಕೂ ವ್ಯತ್ಯಾಸ ಕಡಿಮೆಯಾಗುತ್ತಾ ಹೋಗುತ್ತದೆ ಮತ್ತು ವ್ಯತ್ಯಾಸ ಗುರುತಿಸುವುದೂ ಕಷ್ಟಸಾಧ್ಯ.

### ತಲೆದೋರಿದ ಆತಂಕ

ಮಾಹಿತಿ ತಂತ್ರಜ್ಞಾನದ ಬಗ್ಗೆ ತಿಳಿದುಕೊಳ್ಳುವುದು ಇಂದಿನ ಕಾಲಘಟ್ಟದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಬಹುಮುಖ್ಯ. ಆದರೆ, ಚಾಟ್‌ಜಿಪಿಟಿಯಂತಹ ಟೆಕ್ ವ್ಯವಸ್ಥೆಯಲ್ಲಿ ಪ್ರತಿ ಪ್ರಶ್ನೆಗೂ ಸಿದ್ಧಮಾದರಿಯ ಉತ್ತರವು ಸುಲಭವಾಗಿ ಸಿಗುವುದರಿಂದ, ವಿದ್ಯಾರ್ಥಿಗಳು ಇಂತಹದ್ದೇ ಮಾದರಿಗಳಿಗೆ ಹೆಚ್ಚಾಗಿ ಜೋತು ಬೀಳುತ್ತಾರೆ. ಇದು ವಿದ್ಯಾರ್ಥಿಗಳ ಜ್ಞಾನದ ಮಟ್ಟವನ್ನು ಕುಸಿಯುವಂತೆ ಮಾಡುವುದಲ್ಲದೆ ಸ್ವಂತಿಕೆಯಿಂದ ಯೋಚಿಸುವ ಕ್ರಿಯೆಯಿಂದ ಅವರನ್ನು ವಂಚಿಸುತ್ತದೆ ಎನ್ನುವ ಆತಂಕವೂ ಈಗ ತಲೆದೋರಿದೆ. ಇದೇ ಕಾರಣಕ್ಕೆ ಬೆಂಗಳೂರಿನ ಕೆಲವೊಂದು ಶಾಲೆಗಳು ಚಾಟ್‌ಜಿಪಿಟಿಯಂತಹ ಚಾಟ್‌ಬಾಟ್ ವ್ಯವಸ್ಥೆಗಳು ಒದಗಿಸುವ ಪಠ್ಯಕ್ಕೆ ನಿಷೇಧ ಹೇರಿವೆ ಎನ್ನಲಾಗಿದೆ. ■